**ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**ಸಿ. ಸಿ. ನಂ. 47/2024**

ಸಿಡಬ್ಲ್ಯೂ-06/ಪಿಡಬ್ಲ್ಯೂ-04

| | |
|---|---|
| ಸಾಕ್ಷಿದಾರರ ಹೆಸರು | ಅಶೋಕ ಸವಣೂರು |
| ತಂದೆ ಹೆಸರು | ಬಸಪ್ಪ |
| ವಯಸ್ಸು | 60 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಚಂದ್ರಗಿರಿ ಗ್ರಾಮ |

**ದಿನಾಂಕ : 16-04-2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಪ್ರಭಾರ ಸಹಾಯಕ ಸರಕಾರಿ ಅಭಿಯೋಜಕರಿಂದಃ**

1. ನನಗೆ ಚಾಸಾ-1, 4, 5, 7 ರಿಂದ 9 ರವರ ಪರಿಚಯ ಇರುತ್ತದೆ.

2. ದಿಃ 25-02-2023 ರಂದು ಚಾಸಾ-4 ರವರು ತಮ್ಮ ಜಮೀನಿಗೆ ನೀರಿನ ಪೈಪ್ ಗಳ ಮೂಲಕ ನೀರನ್ನು ಹಾಯಿಸಲು ಬಿಟ್ಟಿದ್ದರು. ಸದರಿ ನೀರನ್ನು ಹಾಯಿಸಿದ ಪರಿಣಾಮ ಸ್ವಲ್ಪ ಮಟ್ಟಿಗೆ ನೀರು ಆರೋಪಿಗಳ ಜಮೀನಿಗೆ ಹರಿದಿತ್ತು. ಮರುದಿನ ದಿಃ 26-02-2023 ರಂದು ಚಾಸಾ-4 ರವರು ಜಮೀನಿಗೆ ಹಾಯಿಸಿದ ನೀರನ್ನು ನೋಡಲು ಬೆಳಗ್ಗೆ 8 ಗಂಟೆಗೆ ಹೋಗಿರುತ್ತಾರೆ. ಆಗ ಆನಂದಪ್ಪ ಮತ್ತು ಮೂಕಪ್ಪ ರವರು ತಮ್ಮ ಜಮೀನಿಗೆ ನೀರು ಹಾಯ್ದು ವಿಷಯವನ್ನು ತೆಗೆದುಕೊಂಡು ಚಾಸಾ-4 ರವರಿಗೆ ಬಡಿಗೆಯಿಂದ ಕಾಲುಗಳು, ಕೈಗಳು ಮತ್ತು ದುಬ್ಬಕ್ಕೆ ಹೊಡೆದಿರುತ್ತಾರೆ. ಆತನನ್ನು ಕೆಳಕ್ಕೆ ಕೆಡವಿ ಕಾಲಿನಿಂದ ಒದ್ದಿರುತ್ತಾರೆ. ಘಟನೆಯ ಸಮಯಕ್ಕೆ ನಾನು ಮತ್ತು ಚಾಸಾ-5 ರವರು

ಪಕ್ಕದ ಜಮೀನಿನಲ್ಲಿ ಇದ್ದು, ಅಲ್ಲಿಗೆ ತಕ್ಷಣ ಹೋಗಿರುತ್ತೇವೆ. ನಾವು ಘಟನಾ ಸ್ಥಳಕ್ಕೆ ಹೋಗುತ್ತಿದ್ದಂತೆ ಇಬ್ಬರು ಆರೋಪಿಗಳು ಘಟನಾ ಸ್ಥಳದಿಂದ ಹೋಗಿರುತ್ತಾರೆ. ಘಟನೆಗೆ ಸಂಬಂಧಿಸಿದಂತೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ ಬಡಿಗೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮು.ಮಾ–1 ಎಂದು ಗುರುತಿಸಲಾಗಿದೆ. ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅನುಮತಿ ನೀಡಲಾಗಿದೆ)**

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ**

1. ಆರೋಪಿಗಳು ಚಾಸಾ-4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ. ಸದರಿ ಸಂಗತಿಯನ್ನು ಚಾಸಾ-5 ರವರು ಚಾಸಾ-4 ರವರ ತಂದೆಗೆ ದೂರವಾಣಿ ಕರೆ ಮಾಡಿ ತಿಳಿಸಿರುತ್ತಾರೆ ಎಂದರೆ ಸರಿ. ತಕ್ಷಣ ಅವರ ತಂದೆ ಮತ್ತು ಚಾಸಾ-1 ರವರು ಘಟನಾ ಸ್ಥಳಕ್ಕೆ ಹೋಗಿರುತ್ತಾರೆ ಎಂದರೆ ಸರಿ. ಅವರು ಹೋದ ನಂತರ ಜಮೀನಿಗೆ ನೀರು ಹಾಯಿಸಿದ್ದೀಯಾ ಎಂದು ಹೇಳಿ ಜೀವ ಬೆದರಕೆ ಹಾಕಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು: ಆರೋಪಿಗಳ ಪರ ಶ್ರೀ ಎಸ್.ಜಿ.ವಿ ವಕೀಲರಿಂದ:**

1. ನಾನು ಹಲವಾರು ವ್ಯಾಜ್ಯಗಳಲ್ಲಿ ನ್ಯಾಯಾಲಯಕ್ಕೆ ಬರುತ್ತೇನೆ ಎಂದರೆ ಸರಿ. ಘಟನೆಗೆ ಸಂಬಂದಿಸಿದಂತೆ ಪಿರ್ಯಾದನ್ನು ನನ್ನ ಅಕ್ಕ ಸಲ್ಲಿಸಿರುತ್ತಾರೆ. ಅವರು ಘಟನೆ ಆದ ಎಷ್ಟು ದಿನದ ನಂತರ ಪಿರ್ಯಾದನ್ನು ದಾಖಲಿಸಿರುತ್ತಾರೆ ಎಂದರೆ



ಗೊತ್ತಿಲ್ಲ. ಘಟನೆಗೆ ಸಂಬಂಧಿಸಿದಂತೆ ಹೇಳಿಕೆಯನ್ನು ಯಾವ ದಿನಾಂಕದಂದು ತನಿಖಾಧಿಕಾರಿಗೆ ನೀಡಿರುತ್ತೇನೆ ಎಂದು ನೆನಪಿಲ್ಲ. ಹೇಳಿಕೆಯನ್ನು ಆಡೂರು ಪೊಲೀಸ್ ಠಾಣೆಯಲ್ಲಿ ನೀಡಿರುತ್ತೇನೆ.

2. ನನ್ನ ಮತ್ತು ಚಾಸಾ-4 ರವರ ಜಮೀನುಗಳು ಒಂದೇ ಸ್ಥಳದಲ್ಲಿ ಅಕ್ಕಪಕ್ಕದಲ್ಲಿ ಇವೆ ಎಂದರೆ ಸರಿ. ನನಗೆ ಸೇರಿದ ಜಮೀನಿನ ಸ ನಂಃ 14. ಆರೋಪಿಗಳ ಜಮೀನಿನ ಸರ್ವೇ ನಂಬರ ಸಹ 14. ಆರೋಪಿಗಳ ಜಮೀನು ನನ್ನ ಮತ್ತು ಚಾಸಾ-4 ರವರ ಜಮೀನುಗಳ ಮಧ್ಯದಲ್ಲಿ ಇವೆ ಎಂದರೆ ಸರಿ. ಚಾಸಾ-4 ತನ್ನ ಜಮೀನಿನ ಮೇಲೆ ನೀರಿನ ಪೈಪ್ ಗಳನ್ನು ನಿಲ್ಲಿಸಿದ್ದನು. ಜಮೀನಿನ ನೀರಿನ ಪೈಪುಗಳನ್ನು ಬೇರೆ ಜಮೀನುಗಳಿಗೆ ತೊಂದರೆ ಆಗದಂತೆ ಅಳವಡಿಸಬೇಕಾಗುತ್ತದೆ ಎಂದರೆ ಸರಿ.

3. ಘಟನೆಯ ಹಿಂದಿನ ದಿನ ಚಾಸಾ-4 ತನ್ನ ಜಮೀನಿಗೆ ನೀರನ್ನು ಹಾಯಿಸಿದ್ದ ಬಗ್ಗೆ ನಾನು ನೋಡಿರುವುದಿಲ್ಲ. ನಾನು ಘಟನಾ ದಿನ ನನ್ನ ಜಮೀನಿಗೆ ಬೆಳಗ್ಗೆ 6.30 ರ ಸಮಯಕ್ಕೆ ಹೋಗಿರುತ್ತೇನೆ. ನನ್ನ ಜಮೀನಿನಲ್ಲಿ ಗೋವಿನ ಜೋಳದ ಫಸಲನ್ನು ಬೆಳೆದಿದ್ದೆ. ಘಟನಾ ಜಾಗದಿಂದ ನನ್ನ ಜಮೀನಿಗೆ ಸುಮಾರು 200 ರಿಂದ 300 ಅಡಿಗಳ ದೂರ ಇದೆ. ಘಟನೆಯಲ್ಲಿ ಜಗಳವು ಬೆಳಗ್ಗೆ 8 ಗಂಟೆಗೆ ಪ್ರಾರಂಭವಾಗಿತ್ತು. ಜಗಳವು ಪ್ರಾರಂಭವಾದ ಶಬ್ದವು ನನಗೆ ಕೇಳಿ ಘಟನಾ ಸ್ಥಳಕ್ಕೆ ನಾನು ಸುಮಾರು ಬೆಳಗ್ಗೆ 8 ರಿಂದ 8.05 ರ ಸಮಯದಲ್ಲಿ ಹೋಗಿರುತ್ತೇನೆ. ನಾನು ಘಟನಾ ಸ್ಥಳಕ್ಕೆ ಹೋದಾಗ ಆರೋಪಿಗಳು ಚಾಸಾ-4 ರವರಿಗೆ ಹಲ್ಲೇ ಮಾಡುತ್ತಿದ್ದರು ಮತ್ತು ಅಲ್ಲಿಗೆ ಹೋದ ಕೂಡಲೇ ಹೊಡೆಯುವುದನ್ನು ನಿಲ್ಲಿಸಿ ಹೋಗಿರುತ್ತಾರೆ. ನಾನು ಘಟನಾ ಸ್ಥಳಕ್ಕೆ ಹೋಗುತ್ತಿದ್ದಂತೆ ಆರೋಪಿಗಳು ಘಟನಾ ಸ್ಥಳದಿಂದ ಹೋಗಿರುತ್ತಾರೆ.

4. ನನ್ನ ಮುಖ್ಯ ವಿಚಾರಣೆಯಲ್ಲಿಯೇ ಆರೋಪಿಗಳು ಚಾಸಾ-4 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತಾ ಹೋಗಿರುತ್ತಾರೆ ಎಂಬುವ ಸಂಗತಿಯನ್ನು ಹೇಳಲು



ತೊಂದರೆ ಇರಲಿಲ್ಲ. ನಾನು ಘಟನಾ ಸ್ಥಳಕ್ಕೆ ಹೋದಾಗ ನೀರಿನ ಪೈಪುಗಳು ಕಿತ್ತಿರಲಿಲ್ಲ. ದೂರವಾಣಿ ಮೂಲಕ ಕರೆ ಮಾಡಿದ ನಂತರ ಘಟನಾ ಸ್ಥಳಕ್ಕೆ ಚಾಸಾ-1, ಆಕೆಯ ಗಂಡನೊಂದಿಗೆ ನಾನು ಪುನಃ ಘಟನಾ ಸ್ಥಳಕ್ಕೆ ಹೋಗಿರುತ್ತೇವೆ. ಅವರು ಘಟನಾ ಸ್ಥಳಕ್ಕೆ ಬಂದಾಗ ಬೆಳಗ್ಗೆ 8.30 ರಿಂದ 9.00 ರ ಸಮಯವಾಗಿತ್ತು. ಆರೋಪಿಗಳು ಚಾಸಾ-4 ರವರಿಗೆ ಹೊಡೆದಿದ್ದಾರೆ ಎಂದು ಆಧರಿಸುವ ಸಂಗತಿಗಳನ್ನು ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ.

5. ಚಾಸಾ-4 ರವರನ್ನು ಘಟನೆ ಆದ ನಂತರ ಚಿಕಿತ್ಸೆಗಾಗಿ ಅವರ ತಂದೆ -ತಾಯಿ ಕರೆದುಕೊಂಡು ಹೋಗಿರುತ್ತಾರೆ. ಆತನನ್ನು ಹಾನಗಲ್ಲನ ಸರಕಾರಿ ತಾಲೂಕು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಆರೋಪಿಗಳು ತಮ್ಮ ಜಮೀನನ್ನು ನಮಗೆ ಮಾರಾಟ ಮಾಡಲು ನಿರಾಕರಿಸಿದ ಕಾರಣಕ್ಕೆ ಅವರ ಜಮೀನನ್ನು ಹೇಗಾದರೂ ಪಡೆಯಬೇಕೆಂಬ ದುರುದ್ದೇಶದಿಂದ, ಘಟನೆ ನಡೆಯದೇ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ಚಾಸಾ-4 ರವರಿಗೆ ಯಾವುದೇ ರೀತಿಯಲ್ಲೂ ಹಲ್ಲೇ ಮಾಡದೇ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ಮು.ಮಾ-1 ರಿಂದಲೇ ಆರೋಪಿಗಳು ಚಾಸಾ-4 ರವರಿಗೆ ಹಲ್ಲೇ ಮಾಡಿದ್ದರು ಎಂದು ಗುರುತಿಸಲು ಯಾವುದಾದರೂ ಗುರುತುಗಳು ಮಾಡಲಾಗಿದೆಯಾ ಎಂಬ ಸೂಚನೆಗೆ ಸಾಕ್ಷಿಯು ಬರಿಕಣ್ಣಿನಲ್ಲಿ ನೋಡಿದರೇ ಅದೇ ಎಂದು ಹೇಳಬಹುದು ಎಂದು ನುಡಿಯುತ್ತಾರೆ. ಮು.ಮಾ-1 ರ ಬಡಿಗೆಗೆ ಮಣ್ಣಿನ ಬದಿಯು ಅಂಟಿಕೊಂಡಿದೆಯೇ ಎಂಬ ಸೂಚನೆಗೆ ಜಗಳವಾದ ಸ್ಥಳದಲ್ಲಿ ಜಮೀನಿಗೆ ನೀರು ಹಾಯ್ದಿರಲಿಲ್ಲ ಹಾಗಾಗಿ ಮಣ್ಣು ಅಂಟಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ಮು.ಮಾ-1 ರ ಬಡಿಗೆಯು ಸಾಮಾನ್ಯವಾಗಿ ಎಲ್ಲಾ ರೈತರ

- 5 -

ಮನೆಯಲ್ಲಿ ಸಿಗುತ್ತದೆ ಎಂದರೆ ಸರಿ. ಮು.ಮಾ-1 ರ ಬಡಿಗೆಯಿಂದ 1 ನೇ ಆರೋಪಿಯಾದ ಆನಂದಪ್ಪ ಹೊಡೆದಿರುತ್ತಾನೆ. ಆತನೇ ಬಡಿಗೆಯಿಂದ ಹೊಡೆದಿರುತ್ತಾನೆ ಎಂದು ಹೇಳಿಕೆಯಲ್ಲಿ ತಿಳಿಸಿರುವುದಿಲ್ಲ.

**<u>ಮರು ವಿಚಾರಣೆ: ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.
Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್

ಸಾಕ್ಷಿದಾರರ ಸಹಿ